ರಸಗೊಬ್ಬರ ಸರಬರಾಜು ಹಾಗೂ ವಿತರಣೆಯ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 63 : (25)

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)

ಉತ್ತರಿಸುವ ಸಚಿವರು : ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಕ್ರ.ಸಂ.	ಪ್ರಶ್ನೆ
ಅ)	ಹಾಸನ ಜಿಲ್ಲೆಗೆ ಅಗತ್ಯಗನುಗುಣವಾಗಿ ರೈತರಿಗೆ ರಸಗೊಬ್ಬರ ಸರಬರಾಜು ಮತ್ತು ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. The required fertilizer to the farmers of Hassan District has not been supplied - whether it has come to the notice of the Government
ಉತ್ತರ	
	ಬಂದಿದೆ Yes

ಕ್ರ.ಸಂ.	ಪ್ರಶ್ನೆ
ಆ)	ಹಾಗಿದ್ದಲ್ಲಿ. ರಸಗೊಬ್ಬರ ಸರಬರಾಜು ಮತ್ತು ವಿತರಣೆಯಾದ ಪ್ರಮಾಣವೆಷ್ಟು ಹಾಗೂ ಅಗತ್ಯವಿದ್ದ ಪ್ರಮಾಣವೆಷ್ಟು (ವಿವರ ನೀಡುವುದು) If so. what is the quantity of fertilizer supplied. destributed and quantity of requirment (details to be furnished):
ಉತ್ತರ	
	ಏಪ್ರಿಲ್ 2008 ಮಾಹೆ ಯಿಂದ ಜೂನ್ ಅಂತ್ಯದವರೆಗೆ ವಿವಿಧ ರಸಗೊಬ್ಬರಗಳಾದ ಯೂರಿಯಾ. ಡಿ.ಎ.ಪಿ ಎಂ.ಒ.ಪಿ. ಮತ್ತು ಎನ್.ಪಿ.ಕೆ ಯ ಬೇಡಿಕೆ. ಸರಬರಾಜು ಪ್ರಮಾಣ ಮತ್ತು ಮಾರಾಟ ವಿವರಗಳನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

The details of Requirement. Receipt and Sales from April 2008 to june 2008 are enclosed - Annexure –1

ಕ್ರ.ಸಂ.	ಪ್ರಶ್ನೆ
ಇ)	ಆಲೂಗಡ್ಡೆ. ಜೋಳ. ಭತ್ತ. ಕಾಫಿ ಮತ್ತು ಶುಂಠಿ ಬೆಳೆಗಳಿಗೆ ರಸಗೊಬ್ಬರ ಪ್ರಮಾಣ ತೀರಾ ಕಡಿಮೆಯಾಗಿದ್ದು. ಕಾಫಿ ಬಿತ್ತನೆಗೆ ತೊಂದರೆಯಾದ ಕಾರಣ ಸರಬರಾಜು ಮತ್ತು ವಿತರಣೆಗೆ ಕೈಗೊಂಡ ಕ್ರಮವೇನು? The quantity of fertilizer was wery less for potato. jowar. paddy. coffee and Turmcric What is the action taken for the fertilizers supply and distribution for Coffee sowing?
ಉತ್ತರ	
	ರಾಜ್ಯ ಕೃಷಿ ಇಲಾಖೆಯು ನೀಡಿರುವ ಜಿಲ್ಲಾವಾರು. ಮಾಹೆವಾರು ರಸಗೊಬ್ಬರ ಬೇಡಿಕೆಯಂತೆ ಕರ್ನಾಟಕಕ್ಕೆ ರಸಗೊಬ್ಬರಗಳನ್ನು ಸಕಾಲದಲ್ಲಿ ಸರಬರಾಜು ಮಾಡುವಂತೆ ಭಾರತ ಸರ್ಕಾರವನ್ನು ಕೋರಲಾಗಿದೆ. The Government of India has been requested to ensure timely supply of fertilizers to Karnataka as per the district-wise. month-wise demand projected by State Department of Agriculture.

ಅನುಬಂಧ – 1

ಹಾಸನ ಜಿಲ್ಲೆಗೆ ಬೇಡಿಕೆ ಮತ್ತು ಹಂಚಿಕೆ ವಿವರ
(ಏಪ್ರಿಲ್ 08 ರ ಮಾಹೆಯಿಂದ ಜೂನ್ –08 ರ ಮಾಹೆ ಅಂತ್ಯದವರೆಗೆ)

ಕ್ರ.ಸಂ.	ಜಿಲ್ಲೆ	ರಸಗೊಬ್ಬರ ಗ್ರೇಡ್	ಬೇಡಿಕೆ	ಲಭ್ಯತೆ	ಮಾರಾಟ	ಅಂತಿಮ ಶುಲ್ಲ
1	ಹಾಸನ	ಯೂರಿಯಾ	14376	21.253.84	15.354.91	5.898.93
		ಡಿ.ಎ.ಪಿ	10629	10.159.81	8.579.68	1.580.13
		ಎಂ.ಒ.ಪಿ	8786	10.582.46	9.686.91	895.558
		ಎನ್.ಪಿ.ಕೆ	19861	17.466.22	17.253.40	212.815

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಹಾಸನ ಜಿಲ್ಲೆಗೆ ಅಗತ್ಯವಾದಂಥ ರಸಗೊಬ್ಬರ ಸರಬರಾಜು ಮತ್ತು ವಿತರಣೆ ತೃಪ್ತಿಕರವಾಗಿಲ್ಲವೆಂದು ಮಾನ್ಯ ಸಚಿವರು ಒಪ್ಪಿದ್ದಾರೆ. ನಮ್ಮ ಹಾಸನ ಜಿಲ್ಲೆಗೆ ಅಗತ್ಯವಿರುವ ಕಾಂಪ್ಲೆಕ್ಸ್ ಗೊಬ್ಬರ ಸುಮಾರು 51.500 ಮೆ.ಟನ್. ಇಲ್ಲಿಯವರೆಗೆ (ಮೇ ಜೂನ್ ಜುಲೈ) ಬಂದಿರುವುದು 31.000 ಮೆ.ಟನ್. ಅಗತ್ಯವಾಗಿರುವ 20:20 ಗೊಬ್ಬರ 25.000 ಮೆ.ಟನ್. ಇಲ್ಲಿಯವರೆಗೆ ಬಂದಿರುವುದು 10.000 ಮೆ.ಟನ್. ಹಾಸನ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಎಕರೆ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆಯುತ್ತಾರೆ. ನಮ್ಮ ಸಕಲೇಶಪುರ. ಆಲೂರು. ಅರಕಲಗೂಡು. ಬೇಲೂರು. ಇಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಎಕರೆ ಜಮೀನಿನಲ್ಲಿ ಕಾಫಿ ಬೆಳೆಯುತ್ತಾರೆ. ಆದರೆ ಇಲ್ಲಿಯವರೆಗೆ ಸರಬರಾಜಾಗಿರುವ ಒಟ್ಟು ಗೊಬ್ಬರ ಸುಮಾರು 2000 ಮೆ.ಟನ್ ಮಾತ್ರ ಅಗತ್ಯವಾಗಿರುವುದು 15 ಸಾವಿರ ಮೆ.ಟನ್. ಇಷ್ಟೊಂದು ಕಡಿಮೆ ಪ್ರಮಾಣದ ಗೊಬ್ಬರ ಸರಬರಾಜು ಆದರೆ ಕಾಫಿ ಬೆಳೆ ಹೇಗೆ ಆಗಬೇಕು. ಇನ್ನಿತರ ಬೆಳೆಗಳ ಸ್ಥಿತಿಗತಿ ಏನು? ಮಾನ್ಯ ಸಚಿವರು ಹೆಚ್ಚು ಗಮನ ಕೊಟ್ಟು ತಕ್ಷಣ ಅಗತ್ಯವಿರುವ ಗೊಬ್ಬರವನ್ನು ಸರಬರಾಜು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್.ಎ.ರವೀಂದ್ರನಾಥ್ : ಹಾಸನ ಜಿಲ್ಲೆಗೆ ಬೇಡಿಕೆ ಮತ್ತು ಹಂಚಿಕೆಯಾಗಿರುವ ವಿವರವನ್ನು ನಾನು ತಿಳಿಸುತ್ತೇನೆ. ಡಿಎಪಿ ಅಲ್ಲಿಗೆ 10629 ಟನ್ ಬರಬೇಕಾಗಿತ್ತು ಆದರೆ 10159 ಟನ್ ಬಂದಿದ್ದು ಅದು ವಿತರಣೆಯಾಗಿದೆ. ಅದೇ ರೀತಿ ಕಾಂಪ್ಲೆಕ್ಸ್ 19861 ಟನ್ ಬರಬೇಕಾಗಿತ್ತು. ಆದರೆ 17466 ಟನ್ ಬಂದಿದ್ದು ಅದು ವಿತರಣೆಯಾಗಿದೆ. ಇರುವುದರಲ್ಲಿ ಕರ್ನಾಟಕದಲ್ಲಿ ಹಾಸನ ಜಿಲ್ಲೆಗೆ ಸಮರ್ಪಕವಾಗಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಹೀಗಾಗಿ ಕೊರತೆ ಇರುವುದರ ಬಗ್ಗೆ ಈಗ ಚರ್ಚಿಸಲಾಯಿತು. ನಮ್ಮ ರಾಜ್ಯಕ್ಕೆ ಸಾಕಷ್ಟು ಗೊಬ್ಬರ ಬರಬೇಕಾಗಿದೆ. ಬಂದ ಮೇಲೆ ಅದನ್ನು ಸಮರ್ಪಕವಾಗಿ ಹಂಚುವಂಥ ಕೆಲಸ ನಾವು ಮಾಡುತ್ತೇವೆ.